**ದಿನಾಂಕಃ 18-07-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು .**

**ಮುಂದುವೆರದ ಮುಖ್ಯ ವಿಚಾರಣೆ: ವಾದಿ ಪರ ವಕೀಲರಾದ ಶ್ರೀ ಎಂ.ಸಿ.ಎಸ್. ವಕೀಲರಿಂದಃ**

ದಿಃ 11-08-2010 ರಂದು ಶೇಖಪ್ಪ ತಂದೆ ಕೃಷ್ಟಪ್ಪ ಊರ್ಫ್ ಕೃಷ್ಣಪ್ಪ ಜಡೇದ ರವರ ಬಳಿಯಿಂದ ವಾಸುದೇವ ಮಂಜುನಾಥ ಹೆಬ್ಬಾರ ರವರು ದಾವಾ ಸ್ವತ್ತು ಪ್ಲಾಟ್ ನಂ.82 ನ್ನು ನೊಂದಣಿ ಖರೀದಿ ಪತ್ರದ ಮುಖಾಂತರ ಖರೀದಿ ಮಾಡಿದ್ದಾರೆ ಎಂದು ತೋರಿಸಲು ಸದರಿ ನೊಂದಣಿ ಖರೀದಿ ಪತ್ರದ ಡಿಜಿಟಲ್ ಪ್ರತಿಯನ್ನು ಹಾಜರು ಮಾಡಿದ್ದೇನೆ ಅದನ್ನು ನಿ.ಪಿ-1 ಎಂದು ಗುರುತಿಸಲಾಯಿತು.

ದಿಃ 15-04-2014 ರಂದು ಸದರಿ ವಾಸುದೇವ ಹೆಬ್ಬಾರ ರವರು ನನ್ನ (ವಾದಿ ರಾಮಚಂದ್ರ) ಹಾಗು 3 ನೇ ಪ್ರತಿವಾದಿ ಕವಿತಾ ರವರ ಹೆಸರಿಗೆ ಬರೆದು ನೀಡಿರುವ ಮೃತ್ಯು ಪತ್ರ ದಿಃ 26-04-2014 ರಂದು ನೊಂದಣಿಯಾಗಿರುವ ಮೃತ್ಯು ಪತ್ರದ ದೃಢಿಕೃತ ನಕಲನ್ನು ಹಾಜರು ಮಾಡಿದ್ದೇನೆ ಅದನ್ನು ನಿ.ಪಿ-2 ಎಂದು ಗುರುತಿಸಲಾಯಿತು.

ದಿಃ 26-10-2014 ರಂದು ಸದರಿ ವಾಸುದೇವ ಹೆಬ್ಬಾರ

ರವರು ಮರಣ ಹೊಂದಿದ್ದಾರೆ ಎಂದು ತೋರಿಸಲು ಸದರಿಯವರ ಮರಣ ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದೇನೆ ಅದನ್ನು ನಿ.ಪಿ–3 ಎಂದು ಗುರುತಿಸಲಾಯಿತು. ದಾವಾ ಸ್ವತ್ತಿಗೆ ಸಂಬಂಧಪಟ್ಟ ಎಂ.ಇ ನಂ.1942/14–15 ರ ದೃಢಿಕೃತ ನಕಲನ್ನು ಹಾಜರು ಮಾಡಿದ್ದೇನೆ ಅದನ್ನು ನಿ.ಪಿ–4 ಎಂದು ಗುರುತಿಸಲಾಯಿತು.

ದಿಃ 25–09–2017 ರಂದು ನೀಡಲಾಗಿರುವ ದಾವಾ ಸ್ವತ್ತಿಗೆ ಸಂಬಂಧಪಟ್ಟ ಗಣಕೀಕೃತ ಪಹಣಿಯನ್ನು ಹಾಜರು ಮಾಡಿದ್ದೇನೆ ಅದನ್ನು ನಿ.ಪಿ–5 ಎಂದು ಗುರುತಿಸಲಾಯಿತು.

ದಿಃ 18–03–2021 ರಂದು ನೀಡಲಾಗಿರುವ ದಾವಾ ಸ್ವತ್ತಿಗೆ ಸಂಬಂಧಪಟ್ಟ ಗಣಕೀಕೃತ ಪಹಣಿಯನ್ನು ಹಾಜರು ಮಾಡಿದ್ದೇನೆ ಅದನ್ನು ನಿ.ಪಿ–6 ಎಂದು ಗುರುತಿಸಲಾಯಿತು.

ದಾವಾ ಸ್ವತ್ತಿಗೆ ಸಂಬಂಧಪಟ್ಟ ಎಂ.ಇ ನಂ.1369/2021–22 ರ ದೃಢಿಕೃತ ನಕಲನ್ನು ಹಾಜರು ಮಾಡಿದ್ದೇನೆ ಅದನ್ನು ನಿ.ಪಿ–7 ಎಂದು ಗುರುತಿಸಲಾಯಿತು.

ದಿಃ 29–03–2022 ರಂದು ನೀಡಲಾಗಿರುವ ದಾವಾ ಸ್ವತ್ತಿಗೆ

ಸಂಬಂಧಪಟ್ಟ ಗಣಕೀಕೃತ ಪಹಣಿಯನ್ನು ಹಾಜರು ಮಾಡಿದ್ದೇನೆ ಅದನ್ನು ನಿ.ಪಿ-8 ಎಂದು ಗುರುತಿಸಲಾಯಿತು.

ದಾವಾ ಸ್ವತ್ತಿಗೆ ದಾಖಲಾಗಿರುವ ನನ್ನ ಹೆಸರನ್ನು ಬದಲಾವಣೆ ಮಾಡಬಾರದು ಎಂದು ದಿಃ 21-12-2021 ರಂದು ನಾನು ತಹಶೀಲ್ದಾರ ರವರಿಗೆ ತಕರಾರು ಅರ್ಜಿಯನ್ನು ನೀಡಿದ್ದೇನೆ ಎಂದು ತೋರಿಸಲು ಸದರಿ ತಕರಾರು ಅರ್ಜಿಯ ಸ್ವೀಕೃತಿ ಹಿಂಬರಹವನ್ನು ಹಾಜರು ಮಾಡಿದ್ದೇನೆ ಅದನ್ನು ನಿ.ಪಿ-9 ಎಂದು ಗುರುತಿಸಲಾಯಿತು.

ದಾವಾ ಸ್ವತ್ತಿಗೆ ದಾಖಲಾಗಿರುವ ನನ್ನ ಹೆಸರನ್ನು ಬದಲಾವಣೆ ಮಾಡಬಾರದು ಎಂದು ದಿಃ 25-01-2022 ರಂದು ನಾನು ತಹಶೀಲ್ದಾರ ರವರಿಗೆ ತಕರಾರು ಅರ್ಜಿಯನ್ನು ನೀಡಿದ್ದೇನೆ ಎಂದು ತೋರಿಸಲು ಸದರಿ ತಕರಾರು ಅರ್ಜಿಯ ಸ್ವೀಕೃತಿ ಹಿಂಬರಹವನ್ನು ಹಾಜರು ಮಾಡಿದ್ದೇನೆ ಅದನ್ನು ನಿ.ಪಿ-10 ಎಂದು ಗುರುತಿಸಲಾಯಿತು.

ದಾವೆಯಲ್ಲಿ ಕೋರಿ ಕೊಂಡಂತೆ ಆದೇಶ ಆಗಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ .

**ಪಾಟೀ ಸವಾಲುಃ** ಪ್ರತಿವಾದಿಗಳ ಪರ ವಕೀಲರಾದ ಶ್ರೀ ಬಿ.ಆರ್.ಎಂ.

ವಕೀಲರು ಸಮಯ ಬೇಡಿರುವುದರಿಂದ ಮುಂದೂಡಲಾಗಿದೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.
ಸಹಿ/–

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
*ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.*